# ಸುವರ್ಣ ಸಂಭ್ರಮ, ಓದುಗರ ಅಭಿಮಾನ



### ನೂರ್ಕಾಲ ಬಾಳಲಿ

'ಸುಧಾ' 100 ವರ್ಷ ದಾಟುವ ಸಂಭ್ರಮ ನೋಡುವಾಸೆ. ಎಂದೆಂದೂ ಅಭಿಮಾನದ ಈ ಪತ್ರಿಕೆ ನೂರ್ಕಾಲ ಬಾಳಲಿ.

-ಪಿ.ಎಸ್. ಶ್ರೀವತ್ಸ, ಬೆಂಗಳೂರು

### 'ಮಯೂರ' ಹೆಸರು ಸೂಚಿಸಿದ್ದು ನಾನೇ

ಪ್ರಜಾವಾಣಿ ಬಳಗ 1964ರಲ್ಲಿ 'ಸುಧಾ' ಆರಂಭಿಸಿದಾಗಿನಿಂದ ನಾನು ಅದರ ಖಾಯಂ ಓದುಗ. 1965ರಲ್ಲಿ 'ಸುಧಾ' ಸಂಚಿಕೆಯೊಂದರಲ್ಲಿ ನಮ್ಮ ಬಳಗ ಮಾಸಪತ್ರಿಕೆ ಆರಂಭಿಸುವುದಾಗಿ ಹೇಳಿ ಹೆಸರು ಸೂಚಿಸಲು ಪ್ರಕಟಣೆ ನೀಡಿತ್ತು. ಆಗ ಅದಕ್ಕೆ 'ಮಯೂರ' ಎಂಬ ಸುಂದರ ಹೆಸರು ಸೂಚಿಸಿದವನು ನಾನು. ಆಗ ಗೌರವ ಧನವಾಗಿ ಐದು ರೂಪಾಯಿ ಕಳುಹಿಸಿದ್ದರು.

-ಬಿ.ಎಸ್. ರಮೇಶ್, ಬೆಳ್ಳಾವೆ

### ಲಲಿತ ಪ್ರಬಂಧ, ಕವಿತೆ ಇರಲಿ

ತನ್ನ ಮೊದಲ ಸಂಚಿಕೆಯನ್ನು ಸೇತೂರಾಂ ಸಂಪಾದಕತ್ವದಲ್ಲಿ ಹೊರತಂದ 'ಸುಧಾ' ಆಗ ಕಪ್ಪು ಬಿಳುಪು ಪುಟಗಳಿಂದ ಕೂಡಿತ್ತು. ಈಗ ಐವತ್ತರ ಸಂಭ್ರಮಕ್ಕೆ ಕಾಲಿಟ್ಟದ್ದು ತುಂಬಾ ಹೆಮ್ಮೆ ತಂದಿದೆ. ವೈವಿಧ್ಯಮಯ ಜ್ಞಾನಧಾರೆಗಳಿಂದ, ಸುಂದರ ವರ್ಣಚಿತ್ರಗಳ ವೈಭವದಿಂದ ಪತ್ರಿಕೆ ಮೈದುಂಬಿದೆ.

ಕಥೆ, ಕಾದಂಬರಿ, ವೈಚಾರಿಕ ಲೇಖನ, ವ್ಯಂಗ್ಯಚಿತ್ರ, ಟಿವಿ, ಸಿನಿಮಾ ಸಾಹಿತ್ಯದಿಂದ ಸಮೃದ್ಧವಾಗಿರುವ 'ಸುಧಾ'ದಲ್ಲಿ ಕವನ, ಹನಿಕವನ, ಲಲಿತ ಪ್ರಬಂಧಗಳಿಗೂ ಸ್ವಲ್ಪ ಅವಕಾಶವಿರಲಿ.

-ಡಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ

### ಪತ್ರ ಪ್ರಕಟವಾಗಲಿಲ್ಲ!

ಐವತ್ತರ ಸಂಭ್ರಮದ ಮುಖಪುಟ ಬಹಳ ಸೆಳೆಯಿತು. 'ಸುಧಾ'ದಿಂದಲೇ ನಾನು ಪತ್ರಿಕೆ ಓದಲಾರಂಭಿಸಿದ್ದು. ಸಮುದ್ರ ಮಥನಕ್ಕೆ ಅನೇಕ ಪತ್ರ ಬರೆದಿದ್ದೆ. ಒಂದೂ ಪ್ರಕಟವಾಗಲಿಲ್ಲ! ಆದರೆ ಛಲ ಬಿಡದ ತ್ರಿವಿಕ್ರಮನಂತೆ ಬರೆಯುತ್ತಲೇ ಇದ್ದೆ. ಆಮೇಲೆ ಪ್ರಶ್ನೋತ್ತರ ವಿಭಾಗದಲ್ಲಿ ನನ್ನ ಪತ್ರಕ್ಕೆ ಬಹುಮಾನ ಬಂತು. ಅಲ್ಲಿಂದ ನನ್ನ ಸುಧಾ ನಂಟು ಇನ್ನಷ್ಟು ಬೆಳೆಯಿತು.

-ರಾಜೇಂದ್ರ ಹೆಗಡೆ, ಹಾವೇರಿ

### 'ಸುಖೀಭವಿ'ಯಾಗು 'ಸುಧಾ'

ಏನಮ್ಮಾ ಸುಧಾ... ನಿನಗಾಗ್ಲೆ ಐವತ್ತೂಂದ್ರೆ ನಂಬ್ಲಿಕ್ಕೇ ಆಗ್ತಿಲ್ವಲ್ಲ ಕಣೇ... ನಿನ್ನ ಒನಪು ವೈಯಾರ ಥಳುಕು ಬಳುಕು ನೋಡಿದ್ರೆ ನಿನಗಿನ್ನೂ ಹದಿನಾರೇ ಇರಬೋದೇನೋ... ಅಂತ ಅನ್ನಿಸ್ತಿದೆ ಕಣೇ...

ಇರಲಿ, ನಿನಗೆ ಹದಿನಾರೇ ಚಿರವಾಗಿರಲಿ.

ಕಥೆ, ಕಾದಂಬರಿಯಂತೆ ಲಾಸ್ಯ ವಾಡುತ್ತಾ; ಫ್ಯಾಷನ್ ಪ್ರವಾಸ ಮಾಡುತ್ತಾ; ಎಳೆಯರ ಅಂಗಳದಲ್ಲಿ ಜಿಗಿದಾಡುತ್ತಾ; ವಿಚಾರ ಲಹರಿಯಲ್ಲಿ ಮಾತೇ ಮುತ್ತಾಗುತ್ತಾ; ನಗೆ ಹೊನಲಲ್ಲಿ; ಸುಖೀಭವಿ(ವ)ಯಾಗು ಮಗಳೇ ಸುಖೀಭವಿಯಾಗು!!

-ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

### ಮೊದಲ ಸಂಚಿಕೆಯ ಮೋಹಿನಿ!

'ಸುಧಾ' ನಮ್ಮ ಪಾಲಿಗೆ ಕೇವಲ ಪತ್ರಿಕೆಯಾಗಿರದೆ ತಾಯಿ, ಗೆಳತಿ, ಹಿತೈಷಿ ಎಲ್ಲವೂ ಆಗಿದ್ದಾಳೆ.

'ಸುಧಾ' ಪ್ರೌಢಾವಸ್ಥೆ ತಲುಪಿದ್ದರೂ ನಮ್ಮ ಕಣ್ಣಿಗಿನ್ನೂ ಆಕೆ, 'ಸುಧಾ'ಮೃತ ಹಂಚುತ್ತಿರುವ ಮೊದಲ ಸಂಚಿಕೆಯ ಮೋಹಿನಿಯೇ.

-ಕೆ. ಕೃಷ್ಣಕುಮಾರಿ, ಬೆಂಗಳೂರು

---




### ಕರ್ನಾಟಕದ ಹೆಮ್ಮೆ

'ಕರ್ನಾಟಕದತ್ತ ಪ್ರವಾಸಿಗರ ಚಿತ್ತ' ಜ.23ರ ಸಂಚಿಕೆಯ ಎ.ಎಂ.ಸುರೇಶರ ಮುಖಪುಟ ಲೇಖನ ಓದಿ ಹೆಮ್ಮೆಯಿಂದ ಬೀಗುವಂತಾಯಿತು.

-ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ ಎಂ.ಎಸ್.ಮಂಜುನಾಥ ಅಣಜಿ, ಮಾಧನಬಾವಿ/ ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ

### ಆಕಾಶ ಮಲ್ಲಿಗೆ ಸಿಗುವುದೆಲ್ಲಿ?

ಎಲ್. ಚಂಪಾರ 'ಆಕಾಶ ಮಲ್ಲಿಗೆ' ಓದಿದಾಗ ಅದರ ಕಂಪು ಹೊರಸೂಸಿತು. ಅದನ್ನು ನೆಟ್ಟು ಬೆಳೆಸಲು ಸಸಿ ಎಲ್ಲಿ ಸಿಗುತ್ತದೆ?

-ವೆಂ.ಪಾಪ, ಬೆಂಗಳೂರು

### ಸಮಂಜಸ ಬರಹ

ಯಲ್ಲೂರು ಪ್ರಭು ಅವರ 'ಬೆವರುವುದೇಕೆ?' ಲೇಖನ ಸಮಂಜಸವಾಗಿ ಮೂಡಿಬಂದಿದೆ.

-ವೈ.ಜಿ.ನರಸಿಂಹನ್, ಶಿವಮೊಗ್ಗ

### ಮತ್ತೊಂದು ಮುಖದ ಪರಿಚಯ

ಅಲೇಖರ 'ಮಡಿಕೇರಿಯಲ್ಲಿ ಕನ್ನಡ ಜಾತ್ರೆ' ಹಾಗೂ ಬಿ.ಎಂ.ಹನೀಫ್‌ರ ಚಿತ್ರಗಳು ಮಡಿಕೇರಿಯ ಸಾಹಿತ್ಯ ಸಮ್ಮೇಳನದ ಬಗ್ಗೆ ಮತ್ತೊಂದು ಮುಖವನ್ನು ಪರಿಚಯಿಸಿದವು.

-ಬಸವರಾಜ ಹೂಗಾರ, ಹಿರೇಶಿಂಗನಗುತ್ತಿ/ ಎಚ್.ಆನಂದಕುಮಾರ್, ಚಿತ್ರದುರ್ಗ/ ಕಾವ್ಯ ಕಲ್ಮಂಜ, ಉಜಿರೆ/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ಶ್ರೀನಾಥ ಕೊನೇಟಿ, ಬೆಂಗಳೂರು

### ವಿಭಿನ್ನ ಕಥೆ

ವೆಂಕಟೇಶ್ ದಾಸೇಗೌಡರ 'ನೆನೆದವರ ಮನದಲ್ಲಿ' ಕಥೆ ವಿಭಿನ್ನವಾದ ಕಥೆ. ಕಥಾನಾಯಕ ವೆಂಕಟೇಶ್‌ಗೆ ಕೊನೆಯಲ್ಲಿ ಭ್ರಮ ನಿರಸನ ಆಗಿದ್ದು ನೋಡಿ 'ಪಾಪ' ಎನಿಸಿತು.

-ವಿಜಯ, ಬೆಂಗಳೂರು

### ಕಥೆಯಾದ್ದರಿಂದ ಸಹ್ಯ

'ನೆನೆದವರ ಮನದಲ್ಲಿ' ಕಥೆ ಪತ್ತೇದಾರಿಯಂತೆ ಓದಿಸಿಕೊಂಡು ಹೋಯಿತು. ಆದರೆ ವಿವಾಹಿತ ಸ್ತ್ರೀ, ಅಪರಿಚಿತನ ಭುಜದ ಮೇಲೆ ಒರಗಿ ನಿದ್ರಿಸುವುದು ಭಾರತೀಯ ಸಂಸ್ಕೃತಿಯಲ್ಲ; ನೈತಿಕತೆಯೂ ಅಲ್ಲ; ಸಂರಕ್ಷಿತವೂ ಅಲ್ಲ. ಕಥೆಯಾದ್ದರಿಂದ ಸಹ್ಯ.

-ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ

### ಸತ್ಯ ಕಥೆ!

ವಿಶ್ವನಾಥ ವಂಶಾಕೃತ ಮಠರ 'ಸೋರುತಿಹುದು ಮನೆಯ ಮಾಳಿಗೆ' ಚಿಕ್ಕ ಕಥೆ ವಾಸ್ತವಕ್ಕೆ ಹತ್ತಿರವಾಗಿದೆ. ಸತ್ಯ ಘಟನೆಯೇನೋ ಎಂಬಂತಿದೆ!

-ರಾಜಶೇಖರ ಹಾದಿಮನಿ, ಧಾರವಾಡ

### ರಾಮ್‌ಗೆ ರಾಮ್ ರಾಮ್

'ನೀವು ಕೇಳಿದಿರಿ?' ಜ. 16ರ ಸಂಚಿಕೆಯಲ್ಲಿ 'ವರನಟ ಡಾ. ರಾಜ್ ಕಾಲದ ಚಿತ್ರಗಳಿಗೂ, ಅವರ ಮಕ್ಕಳ ಕಾಲದ ಚಿತ್ರಗಳಿಗೂ ಏನು ವ್ಯತ್ಯಾಸ ರಾಮ್?' ಎಂಬ ಪ್ರಶ್ನೆಗೆ ರಾಮ್ ನೀಡಿದ ಉತ್ತರಕ್ಕೆ ಬೆಲೆ ಕಟ್ಟಲಾಗದು. ಆ ಉತ್ತರ ಹೀಗಿದೆ: 'ಆ ಕಾಲದ್ದು ಬ್ಯಾಡರ ಕಣ್ಣಪ್ಪ; ಈ ಕಾಲದ್ದು ಬ್ಯಾಡ ಕಣ್ರಪ್ಪ!'

ರಾಮ್‌ಗೆ ರಾಮ್ ರಾಮ್!

-ಪಿ.ಜೆ. ರಾಘವೇಂದ್ರ, ಮೈಸೂರು

### ವರ್ಧಮಾನ ಸಾಹಿತ್ಯ ಪ್ರಶಸ್ತಿಗೆ ಆಹ್ವಾನ

ವರ್ಧಮಾನ ಸಾಹಿತ್ಯ ಪ್ರಶಸ್ತಿಗೆ 2008ರಲ್ಲಿ ಪ್ರಥಮಾವೃತ್ತಿಯಾಗಿ ಪ್ರಕಟವಾದ ಕನ್ನಡ ಸಾಹಿತ್ಯದ ಯಾವುದೇ ಪ್ರಕಾರದ (ಕಾವ್ಯ, ಕಾದಂಬರಿ, ನಾಟಕ, ಸಣ್ಣ ಕತೆ, ವಿಮರ್ಶೆ ಇತ್ಯಾದಿ) ಸಾಹಿತ್ಯ ಕೃತಿಗಳನ್ನು ಆಹ್ವಾನಿಸಲಾಗಿದೆ.

'ವರ್ಧಮಾನ ಸಾಹಿತ್ಯ ಪ್ರಶಸ್ತಿ'ಯು ಹಿರಿಯ ಸಾಹಿತಿಗಳ ಕೃತಿಗೆ ಮೀಸಲಿದ್ದರೆ, 'ವರ್ಧಮಾನ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿ'ಯು ತಮ್ಮ ಮೊದಲನೆಯ, ಎರಡನೆಯ ಇಲ್ಲವೇ ಮೂರನೆಯ ಕೃತಿಗೆ ಅನ್ವಯಿಸುತ್ತದೆ. ಆಸಕ್ತರು ಕೃತಿಯ 3 ಪ್ರತಿಗಳನ್ನು ಫೆ. 28ರ ಒಳಗಾಗಿ: ಮುನಿರಾಜ ರೆಂಜಾಳ, ಸಹ ನಿರ್ದೇಶಕರು, ವರ್ಧಮಾನ ಸಾಹಿತ್ಯ ಪ್ರಶಸ್ತಿ ಪೀಠ, ಜೆ.ಜೆ. ಕಾಲೇಜು, ಮೂಡಬಿದ್ರೆ, ದ.ಕ.-574227- ಇಲ್ಲಿಗೆ ಕಳಿಸಿ. ಮಾಹಿತಿಗೆ: 9449936232